# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ (ದಕ್ಷಿಣ) ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು –02.**

ಸಂಖ್ಯೆ: ಜಂನಿಕಪ (ದ)/ಪ್ರಾ.ಪ/ಸನಿ/32/2019-20 ದಿನಾಂಕ: 06-12-2019.

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಆಸ್ತಿ ಸಂಖ್ಯೆ 55/17/1, 17/2, 17/3, 20/5, 20/6, 20/7, 22/4, 23/4, ತುರುಹಳ್ಳಿ, ಉತ್ತರಹಳ್ಳಿ ಉಪವಿಭಾಗ, ಬೊಮ್ಮನಹಳ್ಳಿ ವಲಯ, ವಾರ್ಡ್ ಸಂಖ್ಯೆ 184, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ಅರ್ಜಿದಾರರ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುವ ಮನವಿ ದಿನಾಂಕ: 08-12-2017 ಮತ್ತು 20-09-2019.

2) ನಕ್ಷೆ ಮಂಜೂರಾತಿ ಸಂಖ್ಯೆ: BBMP/ Addl.Dir/JD South/ 0431/14-15 ದಿನಾಂಕ: 21-04-2016.

3) ಅಪರ ನಿರ್ದೇಶಕರು, ಕಟ್ಟಡ ಪರವಾನಗಿ ಕೋಶ ರವರ ಅನುಮೋದನೆ ದಿನಾಂಕ: 14-11-2019.

*****

ಆಸ್ತಿ ಸಂಖ್ಯೆ 55/17/1, 17/2, 17/3, 20/5, 20/6, 20/7, 22/4, 23/4, ತುರುಹಳ್ಳಿ, ಉತ್ತರಹಳ್ಳಿ ಉಪವಿಭಾಗ, ಬೊಮ್ಮನಹಳ್ಳಿ ವಲಯ, ವಾರ್ಡ್ ಸಂಖ್ಯೆ 184, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ Tower A, E & F – +G+14 UF, Tower B, C & D – 2B+G+14 UF, Tower G – B+G+13 UF and Club House – B+G+2 UF ಗಳ 616 + 62 (EWS) = 678 ಘಟಕಗಳ್ಳುಳ ವಸತಿ ಸಮುಚ್ಚಯ ಕಟ್ಟಡ ನಿರ್ಮಿಸಲು ಈ ಕಛೇರಿಯಿಂದ ಎಲ್.ಪಿ ಸಂಖ್ಯೆ: BBMP/ Addl.Dir/JD South/ 0431/14-15 ದಿನಾಂಕ: 21-04-2016 ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ಉಲ್ಲೇಖ (1) ರ ಮನವಿಗೆ ಸಂಬಂಧಿಸಿದಂತೆ, ವಸತಿ ಸಮುಚ್ಚಯ ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ: 15-10-2019 ರಂದು ಸ್ಥಳ ಪರಿಶೀಲಿಸಲಾಗಿ ಮಂಜೂರಾತಿ ನಕ್ಷೆಯನ್ವಯ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ನಿರ್ಮಿಸಿದ್ದು, ಸದರಿ ಪ್ರಸ್ತಾವನೆಗೆ ಉಲ್ಲೇಖ (3) ರಂತೆ ಅಪರ ನಿರ್ದೇಶಕರು, ಕಟ್ಟಡ ಪರವಾನಗಿ ಕೋಶ ರವರು ಅನುಮೋದನೆ ನೀಡಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 3,53,000/–ಗಳನ್ನು ಅರ್ಜಿದಾರರಿಂದ ರಶೀದಿ ಸಂಖ್ಯೆ: RE-ifms624-TP/000140 ದಿನಾಂಕ: 06-12-2019 ರಂದು ಸಂದಾಯಿಸಿಕೊಳ್ಳಲಾಗಿದೆ. ಆದುದರಿಂದ ಸದರಿ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.

2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

6/12/19

ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

06/12/19 6/12/19 06/12/19



Scanned with CamScanner

3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

4) ಕ್ಷೆ ಮಂಜೂರಾತಿ ಪಡೆದ ದಿನಾಂಕದಿಂದ ಐದು ವರ್ಷದೊಳಗಾಗಿ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

5) ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ರಂತೆ ನಿರ್ವಹಿಸುವುದು.

6) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಒಳಸಿಕೊಳ್ಳುವುದು.

7) ಅರ್ಜಿದಾರರು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.

8) ಅರ್ಜಿದಾರರು ಪ್ರತಿ 240.00 ಚ.ಮೀ ಅನುಪಾತ ವಿಸ್ತೀರ್ಣಕ್ಕೆ ಒಂದರಂತೆ ಗಿಡವನ್ನು ನೆಡುವುದು.

ಸಹಿ/-
ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ

Sri. Sadath Ali Khan
Rep by GPA Holders M/s. Brigade Enterprises Ltd.,
# 29 & 30th Floor, World Trade Centre,
Brigade Gateway Campus, # 26/1,
Dr. Rajkumar Road, Rajajinagar,
Bangalore – 560 055.

ಪ್ರತಿಯನ್ನು: ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು, ಉತ್ತರಹಳ್ಳಿ ಉಪ ವಿಭಾಗ ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

6/12/19

ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

06/12/19 6/12/19 6/12/19

Scanned with CamScanner